# ಡಾ. ಡಿ. ಕೆ. ಚಿತ್ತಯ್ಯ ಪೂಜಾರ್ ಅವರ ಹೊಟ್ಟಣ್ಣ ನಾಯಕನ ಕಥನ ಕಾವ್ಯದ ಅವಲೋಕನ

**ಹನಮಂತಪ್ಪ ಬನ್ನಿ**

ಸಂಶೋಧನಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**Received: 13-04-2024 ; Acepted: 03-06-2024 ; Published: 09-07-2024**

**DOI: https://doi.org/10.5281/zenodo.12672792**

**ABSTRACT:**

ಒಂದು ನಿರ್ದಿಷ್ಟ ಜನಸಮೂಹವನ್ನು ಸಂಕೇತಿಸುವುದು ಜನಪದ. ಜನಪದರು ಮೌಖಿಕ ಮಾಧ್ಯಮದಲ್ಲಿ ಉಳಿಸಿಕೊಂಡು ಬಂದ ಜ್ಞಾನವನ್ನು ಜಾನಪದ ಎಂದು ಕರೆಯಬಹುದು. ಜಾನಪದ ಸಮಸ್ತ ಜನತೆಯ ಸಂಸ್ಕೃತಿಗೆ ಸಂಬಂಧಿಸಿದ ಒಂದು ಪರಂಪರೆ. ಇಂತಹ ಜನಪದವು ಅನೇಕ ಪ್ರಕಾರಗಳನ್ನು ಹೊಂದಿದ್ದು ಕಥನ ಕಾವ್ಯವೂ ಒಂದಾಗಿದೆ. ಅಂತಹ ಪ್ರಮುಖ ಕಥನ ಕಾವ್ಯಗಳಲ್ಲಿ ಡಾ. ಚಿತ್ತಯ್ಯ ಪೂಜಾರ್ ಅವರು ಸಂಶೋಧಿಸಿ ಸಂಪಾದಿಸಿರುವ 'ಮುಮ್ಮಡಿ ಹೊಟ್ಟಣ್ಣ ನಾಯಕನ ಕಥನ ಕಾವ್ಯ'ವೂ ಒಂದು.

ಕಥನ ಕಾವ್ಯಗಳನ್ನು ಸಂಶೋಧಿಸಿ, ಸಂಗ್ರಹಿಸಿ, ಪರಿಷ್ಕರಿಸಿ ಪ್ರಕಟಿಸುವುದು ಸುಲಭದ ಮಾತಲ್ಲ. "ಇದು ಒಂದು ರೀತಿ ಕುಮಾರವ್ಯಾಸ ಭಾರತದ ಅಧ್ಯಯನ ಇದ್ದ ಹಾಗೆ. 'ಕಲಿಯದವರಿಗೆ ಕಾಮಧೇನು ಕಲಿತವರಿಗೆ ಗಂಟಲು ಗಾಣ'. ಈ ಕಥನ ಕಾವ್ಯದ ಸಂಶೋಧನೆಯೂ ಹಾಗೆಯೇ. ಇದರ ಆಳ, ಅಗಲ, ಎತ್ತರ ಮತ್ತು ಬಹುಮುಖ್ಯ ಅರ್ಥಗಳು ಗಂಭೀರವಾಗಿ ಪರಿಭಾವಿಸಿದಷ್ಟು ವಿಸ್ತಾರವಾಗುತ್ತಿರುತ್ತವೆ. ಏಕೆಂದರೆ ಒಂದು ಕಲೆ, ಒಂದು ಆಚರಣೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗುತ್ತಾ ಅರ್ಥ ವಿಸ್ತಾರಗಳನ್ನು ಪಡೆದುಕೊಳ್ಳುತ್ತಾ ಸಂಶೋಧಕರಿಗೆ ಸವಾಲಾಗಿ ಪರಿಣಮಿಸುತ್ತದೆ." ಅಂತಹ ಸವಾಲನ್ನು ಸ್ವೀಕರಿಸಿ ಇಲ್ಲಿ ಎದುರಾಗುವ ಸವಾಲುಗಳನ್ನು ಪರಿಹರಿಸಿ ಪ್ರಕಟಿಸಿರುವುದು ಚಿತ್ತಯ್ಯ ಪೂಜಾರ್‌ರವರ ಶ್ರಮಕ್ಕೆ ಹಿಡಿದ ಕೈಗನ್ನಡಿ. ಈ ಕಥನ ಕಾವ್ಯದ ಕೊನೆಯಲ್ಲಿ ಕೊಟ್ಟಿರುವ ಪಾರಿಭಾಷಿಕ ಪದಗಳ ಅರ್ಥ ಅವರ ಶ್ರಮಕ್ಕೆ ಇನ್ನೊಂದು ಸಾಕ್ಷಿ. ಆದ್ದರಿಂದ ಇದರ ಸಾಂಸ್ಕೃತಿಕ ಮಹತ್ವ ಗುರುತಿಸಿ, ಅದರ ಸಾಧ್ಯಾನುಸಾಧ್ಯತೆಗಳನ್ನು ಪತ್ತೆ ಹಚ್ಚುವುದೇ ಈ ಲೇಖನದ ಉದ್ದೇಶ.

**KEYWORDS:**

ವಾಲಿ, ಕದಲಾವೆ, ಶಿವಲಗ್ಗೆ, ಕಾಳೀಲಿ, ಮುಮ್ಮಡಣ್ಣ , ತರಿಯೂತ, ಜರಮಲೆ, ಕಣಜ.

ಒಂದು ನಿರ್ದಿಷ್ಟ ಜನಸಮೂಹವನ್ನು ಸಂಕೇತಿಸುವುದು ಜನಪದ. ಜನಪದರು ಮೌಖಿಕ ಮಾಧ್ಯಮದಲ್ಲಿ ಉಳಿಸಿಕೊಂಡು ಬಂದ ಜ್ಞಾನವನ್ನು ಜಾನಪದ ಎಂದು ಕರೆಯಬಹುದು. ಜಾನಪದ ಸಮಸ್ತ ಜನತೆಯ ಸಂಸ್ಕೃತಿಗೆ ಸಂಬಂಧಿಸಿದ ಒಂದು ಪರಂಪರೆ. ಮನುಕುಲದ ಈ ಪರಂಪರೆಯನ್ನು ಅನುಭವಾತ್ಮಕವಾಗಿ, ಪ್ರಾಯೋಗಿಕವಾಗಿ, ಮೌಖಿಕವಾಗಿ, ಆಂಗಿಕವಾಗಿ ಪ್ರದರ್ಶಿಸುವ ಅಭಿವ್ಯಕ್ತಿಯ ಸಾಧನ. ಆದಿ ಮಾನವನ

ಕಾಲದಿಂದ ಹಿಡಿದು ಆಧುನಿಕ ಕಾಲದ ನಾಗರಿಕ ಮಾನವ ಸಮುದಾಯಗಳಲ್ಲಿ ಜಾನಪದ ಅಳಿಯದೆ ಉಳಿದುಕೊಂಡು ಬಂದಿದೆ. ಭಾಷೆಗೆ ಲಿಪಿ ಕಾಣಿಸಿಕೊಳ್ಳದ ಪೂರ್ವ ಕಾಲದಲ್ಲಿ ಮಾನವ ಸಮುದಾಯಗಳಲ್ಲಿ ಜಾನಪದ ಅಳಿಯದೆ ಉಳಿದುಕೊಂಡು ಬಂದಿದೆ. ಸಮಾಜದ ಎಲ್ಲಾ ವರ್ತನೆಗಳು ಮೌಖಿಕವಾಗಿಯೇ ಅಭಿವ್ಯಕ್ತವಾಗುತ್ತಿದ್ದವು. ಹಾಡು, ಕುಣಿತ, ಆಚಾರ-ವಿಚಾರಗಳೆಲ್ಲವೂ ಆಯಾ ಸಮುದಾಯಗಳಲ್ಲಿ ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿಯೇ ಸಾಗಿ ಬರುತ್ತಿದ್ದವು. ಹೀಗಾಗಿ ಜಾನಪದವೆನ್ನುವುದು ಇದು ಒಬ್ಬಿಬ್ಬರಿಂದ ಆಗಿದ್ದಲ್ಲ, ಸಾಮೂಹಿಕವಾಗಿ ಸೃಷ್ಟಿಗೊಂಡದ್ದಾಗಿದೆ.

ಜನಪದ ಸಾಹಿತ್ಯವು ಮಾನವನ ಬದುಕಿನ ಕಥೆಯನ್ನು ನಿರೂಪಿಸುತ್ತದೆ. ಮಾನವ ತನ್ನ ಬದುಕಿನಲ್ಲಿ ಕಂಡು-ಕೇಳಿದ-ಅನುಭವಿಸಿದ, ಕಲ್ಪಿಸಿಕೊಂಡ ಅನೇಕ ವಿಚಾರಗಳನ್ನು ಇನ್ನೊಬ್ಬರ ಮನಮುಟ್ಟುವಂತೆ ಪದ ಕಟ್ಟಿ ಹಾಡುತ್ತಾನೆ. ಜನಪದ ಗೀತೆಗಳ ನಿಜವಾದ ಕರ್ತೃ ಯಾರೂ ಅಲ್ಲ. ಅದರಲ್ಲಿ ಅಡಕವಾಗಿರುವುದು ಸಾಮೂಹಿಕ ಭಾವನೆಗಳು, ಸಮೂಹದ ಚಿಂತನೆಗಳು, ಸಮಾಜದ ಎಲ್ಲರದ್ದೂ ಆಗಬಹುದಾದ ಸಾಮಾನ್ಯ ಅನುಭವಗಳು. ಇದು ಜನರ ನೆನಪಿನ ಶಕ್ತಿ ಮತ್ತು ಪುನರುಚ್ಛರಿಸುವ ಸಾಮರ್ಥ್ಯದ ಮೇಲೆ ಉಳಿದುಕೊಂಡಿರುವಂತಹದ್ದು.

ಇಂತಹ ಜನಪದವು ಅನೇಕ ಪ್ರಕಾರಗಳನ್ನು ಹೊಂದಿದ್ದು ಕಥನ ಕಾವ್ಯವೂ ಒಂದಾಗಿದೆ. ಇಂತಹ ಕಥೆಗಳು ಹುಟ್ಟಿಕೊಳ್ಳುವುದು ನೈಜ ಘಟನೆಯನ್ನು ಆಧರಿಸಿ. ವೀರನೊಬ್ಬ ತನ್ನ ಸಮಾಜದ ಆಸ್ತಿಯನ್ನು ಉಳಿಸಿಕೊಳ್ಳುವುದಕ್ಕಾಗಿ ಹೋರಾಟಕ್ಕಿಳಿದು ಸಾವನ್ನಪ್ಪುವುದು ಅಥವಾ ರಾಜನೊಬ್ಬ /ಪಾಳೇಗಾರನೊಬ್ಬ ಜನಪರ ಆಡಳಿತ ನಡೆಸಿ, ಜನಪರ ಕೆಲಸಗಳನ್ನು ಮಾಡಿದಾಗ. ಜನಪದರು ಇಂತಹ ವೀರರ ಕುರಿತು ಕಥನ ಕಾವ್ಯಗಳನ್ನು ಕಟ್ಟಿ ಹಾಡುತ್ತಾರೆ. ಆಮೇಲೆ ಅದು ಬಾಯಿಯಿಂದ ಬಾಯಿಗೆ ಹಬ್ಬುತ್ತಾ ಹೋಗುತ್ತದೆ. ಆದುದರಿಂದ ಈ ಕಥನ ಕಾವ್ಯದ ಲಕ್ಷಣವನ್ನು ಅದರ ವಸ್ತುನಿಷ್ಠತೆ ಎನ್ನಬಹುದು. ಅಂತಹ ಪ್ರಮುಖ ಕಥನ ಕಾವ್ಯಗಳಲ್ಲಿ ಡಾ. ಚಿತ್ತಯ್ಯ ಪೂಜಾರ್ ಅವರು ಸಂಶೋಧಿಸಿ ಸಂಪಾದಿಸಿರುವ 'ಮುಮ್ಮಡಿ ಹೊಟ್ಟಣ್ಣ ನಾಯಕನ ಕಥನ ಕಾವ್ಯ'ವೂ ಒಂದು.

ಮುಂದುವರೆದು, ಮದಕರಿ ನಾಯಕ, ಸಂಗೊಳ್ಳಿ ರಾಯಣ್ಣ, ಮುಂಡರಗಿ ಭೀಮರಾವ್, ಸುರಪುರದ ವೆಂಕಟಪ್ಪ ನಾಯಕ, ಕೆಂಪೇಗೌಡ ಮುಂತಾದವರ ಕುರಿತು ಜನಪದರು ಕಟ್ಟಿದ ಕಥನ ಕಾವ್ಯಗಳನ್ನು ಇಲ್ಲಿ ನೆನೆಯಬಹುದು.

ಕಥನ ಕಾವ್ಯಗಳನ್ನು ಸಂಶೋಧಿಸಿ, ಸಂಗ್ರಹಿಸಿ, ಪರಿಷ್ಕರಿಸಿ ಪ್ರಕಟಿಸುವುದು ಸುಲಭದ ಮಾತಲ್ಲ. "ಇದು ಒಂದು ರೀತಿ ಕುಮಾರವ್ಯಾಸ ಭಾರತದ ಅಧ್ಯಯನ ಇದ್ದ ಹಾಗೆ. 'ಕಲಿಯದವರಿಗೆ ಕಾಮಧೇನು ಕಲಿತವರಿಗೆ ಗಂಟಲು ಗಾಣ'. ಈ ಕಥನ ಕಾವ್ಯದ ಸಂಶೋಧನೆಯೂ ಹಾಗೆಯೇ. ಇದರ ಆಳ, ಅಗಲ, ಎತ್ತರ ಮತ್ತು ಬಹುಮುಖ್ಯ ಅರ್ಥಗಳು ಗಂಭೀರವಾಗಿ ಪರಿಭಾವಿಸಿದಷ್ಟು ವಿಸ್ತಾರವಾಗುತ್ತಿರುತ್ತವೆ. ಏಕೆಂದರೆ ಒಂದು ಕಲೆ, ಒಂದು ಆಚರಣೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗುತ್ತಾ ಅರ್ಥ ವಿಸ್ತಾರಗಳನ್ನು ಪಡೆದುಕೊಳ್ಳುತ್ತಾ

ಸಂಶೋಧಕರಿಗೆ ಸವಾಲಾಗಿ ಪರಿಣಮಿಸುತ್ತದೆ."[1] ಅಂತಹ ಸವಾಲನ್ನು ಸ್ವೀಕರಿಸಿ ಇಲ್ಲಿ ಎದುರಾಗುವ ಸವಾಲುಗಳನ್ನು ಪರಿಹರಿಸಿ ಪ್ರಕಟಿಸಿರುವುದು ಚಿತ್ತಯ್ಯ ಪೂಜಾರ್‌ರವರ ಶ್ರಮಕ್ಕೆ ಹಿಡಿದ ಕೈಗನ್ನಡಿ. ಈ ಕಥನ ಕಾವ್ಯದ ಕೊನೆಯಲ್ಲಿ ಕೊಟ್ಟಿರುವ ಪಾರಿಭಾಷಿಕ ಪದಗಳ ಅರ್ಥ ಅವರ ಶ್ರಮಕ್ಕೆ ಇನ್ನೊಂದು ಸಾಕ್ಷಿ.

ಮುಮ್ಮಡಿ ಹೊಟ್ಟಣ್ಣ ನಾಯಕ ನಿಡುಗಲ್ಲು ಪಾಳೇಗಾರರಲ್ಲಿ ಕೊನೆಯ ಅರಸ. (ಈ ಅರಸು ಮನೆತನದವರು ಕ್ರಿ. ಶ. 1662 ರಿಂದ 1761ರ ವರೆಗೆ ನಿಡುಗಲ್ಲಿನ ದೊರೆಗಳಾಗಿ ಆಳಿದ ದಾಖಲೆಗಳಿಗೆ) ಒಟ್ಟು 14 ಭಾಗಗಳಲ್ಲಿರುವ ಈ ಕಥನ ಕಾವ್ಯ, ಒಂದೊಂದು ಭಾಗ ಒಂದೊಂದು ಪ್ರಸಂಗವನ್ನು ವಿವರಿಸುತ್ತದೆ. ಮುಮ್ಮಡಿ ಹೊಟ್ಟಣ್ಣನಾಯಕ ಪ್ರಜೆಗಳೊಂದಿಗೆ ಸುಖ-ಸಂತೋಷದಿಂದ ಆಳ್ವಿಕೆ ಮಾಡಿಕೊಂಡಿರುವ ಸಂದರ್ಭದಲ್ಲಿ ಇದ್ದಕ್ಕಿದ್ದ ಹಾಗೆ ಮುಸಲ್ಮಾನರ ಸೈನ್ಯವೊಂದು ನಿಡುಗಲ್ಲಿನ ಸಮೀಪದಲ್ಲಿರುವ ರಂಗಸಮುದ್ರ ಎನ್ನುವ ಹಳ್ಳಿಯ ಬಯಲಿನಲ್ಲಿ ಬೀಡು ಬಿಟ್ಟಿರುತ್ತೆ. ಸಕ್ಕರೆ ಸವೆ ನಿದ್ದೆಯಲ್ಲಿ ಮಲಗಿದ್ದ ಮುಮ್ಮಡಿ ನಾಯಕನಿಗೆ "ಧೈರ್ಯವಿದ್ದರೆ ಬಂದು ಯುದ್ಧ ಮಾಡಲಿ" ಎಂದು ಓಲೆ ಬರೆದು ಕಳುಹಿಸುತ್ತಾರೆ. ತನ್ನ ಮಡದಿಯ ಸಹಾಯದಿಂದ ಓದಿಸಿ ತಿಳಿದು ಓಲೆಯನ್ನು ಓದಿ ಕುಪಿತನಾಗಿ ಅದನ್ನು ಕಾಲಿನಿಂದ ಹೊಸಕಿ ಹಾಕಿ ಬಿಜಾಪುರದ ಸುಲ್ತಾನರೊಂದಿಗೆ ಕಾದಾಡುವುದೇ ಈ ಕಥನ ಕಾವ್ಯದ ಕಥಾ ವಸ್ತುವಾಗಿದೆ. ಈ ಮಧ್ಯೆ ಮುಮ್ಮಡಿ ನಾಯಕನ ಬಾಲ್ಯ, ಆತನು ಕೋಟೆಯನ್ನು ನಿರ್ಮಿಸಿದ್ದು, ಆ ಕೋಟೆಯ ಗುಣಗಾನ ಮತ್ತು ತಾನು ಯುದ್ಧಕ್ಕೆ ಸುನ್ನದ್ಧನಾಗಿರುವ ರೀತಿ, ಆಯಕಟ್ಟಿನ ಸ್ಥಳಗಳಲ್ಲಿ ಫಿರಂಗಿಗಳನ್ನು ಇಡಿಸಿದ ವರ್ಣನೆ ಮೈನವಿರೇಳಿಸುವಂತಿವೆ.

ಹೊಟ್ಟಣ್ಣ ನಾಯಕ ಬಾಲ್ಯದಲ್ಲಿಯೇ ಬಲಶಾಲಿಯಾಗಿದ್ದ. ಈತ ಮಗುವಾಗಿದ್ದಾಗಲೇ ಉಯ್ಯಾಲೆಯಲ್ಲಿ ತೂಗಲು ಮೂರು ನಾಲ್ಕು ಜನರಿಂದಲೂ ಸಾಧ್ಯವಾಗುತ್ತಿರಲಿಲ್ಲ. ಅಂತಹ ಧೀರನನ್ನ ತಾಯಿ ಕನಕಮ್ಮ ಹೆತ್ತಿದ್ದಳು. ಎಂಬುದನ್ನು ಜನಪದರು ಹೀಗೆ ವರ್ಣಿಸುತ್ತಾರೆ.

**ಮೂವರು ತೂಗಿದರು**
**ಕದಲಾವೆ ಕನಕಮ್ಮ**
**ರಣಧೀರ ಮಗನ ಪಡೆದಲ್ಲೇ**[2]

ಜನಪದರು ಹೀಗೆ ಹೇಳುವಾಗ 'ಬೆಳೆಯುವ ಸಿರಿ ಮೊಳಕೆಯಲ್ಲಿ ಕಾಣು' ಎನ್ನುವ ಗಾದೆ ಮಾತನ್ನು ಮುಂದೆ ಆತನ ಸಾಹಸಕ್ಕೆ ರೂಪಕವಾಗಿ ಬಳಸಿದ್ದಾರೆ ಎಂದು ಕೊಳ್ಳಬಹುದು.

ಇದ್ದಕ್ಕಿದ್ದ ಹಾಗೆ ಮುಸಲ್ಮಾನರ ಸೈನ್ಯವೊಂದು ಮುಮ್ಮಡಿ ನಾಯಕನಿಗೆ "ಧೈರ್ಯವಿದ್ದರೆ ಬಂದು ಯುದ್ಧ ಮಾಡಲಿ" ಎಂಬ ಓಲೆಯನ್ನು ಕಳುಹಿಸುತ್ತಾರೆ ಆಗ ಸಿಡಿದೆದ್ದ ಹೊಟ್ಟಣ್ಣ ನಾಯಕನ ರೋಷಾಗ್ನಿಯನ್ನ ಈ ಕೆಳಗಿನಂತೆ ಜನಪದರು ಚಿತ್ರಿಸುತ್ತಾರೆ.

**ವಾಲೀಯ ನೋಡಿದ**
**ಕಾಲೀಲಿ ಒರೆಸಿದ**
**ದಿಬ್ಬಕೆ ಬಿಟ್ಟವ್ನೆ ಶಿವಲಗ್ಗೆ**

**ಕ್ಷತ್ರಿಯರ ಮಗನಾಗಿ**
**ಜಗಳಾಕೆ ಅಂಜಿದರೆ**
**ಹುಟ್ಟಿದ ಕುಲಕೆ ಕೆಟ್ಟೆಸರು**

ಹೀಗೆ ಇದೇ ಮಟ್ಟಿನಲ್ಲಿ ಉದ್ದಕ್ಕೂ ಸಾಗುವ ಈ ಕಾವ್ಯ ಹೊಟ್ಟಣ್ಣನ ಯುದ್ಧ ನೈಪುಣ್ಯತೆಯನ್ನು ಮತ್ತು ಶತ್ರುಗಳ ವಿರುದ್ಧ ಸಿದ್ಧಗೊಳ್ಳುವ ತಾಂತ್ರಿಕ ನೈಪುಣ್ಯತೆಯನ್ನ ಜನಪದರು ಮನೋಜ್ಞ ರೀತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಫಿರಂಗಿಗಳನ್ನು ಸಜ್ಜುಗೊಳಿಸಿ ಆ ಫಿರಂಗಿಗಳನ್ನು ಯಾವ ಯಾವ ಪ್ರದೇಶದಲ್ಲಿ ಇಟ್ಟರೆ ಶತ್ರುಗಳನ್ನು ಸುಲಭವಾಗಿ ಸದೆಬಡಿಯಬಹುದು ಎಂಬ ದೂರದೃಷ್ಟಿ , ತನ್ನ ರಾಜ್ಯದ ಬಗ್ಗೆ ಇರುವ ಅಭಿಮಾನ, ಪ್ರಜೆಗಳ ಒಳಿತನ್ನೇ ಬಯಸುವ ಆತನ ಉದಾರತೆ ಜನರ ಮನಸ್ಸಿನಲ್ಲಿ ಶಾಶ್ವತ ಸ್ಥಾನ ಪಡೆಯಲು ಸಾಧ್ಯವಾಗಿದೆ.

**ಕತ್ತಿಯ ಹಿಡಿದು**
**ನೆಗೆದಾನೆ ಮುಮ್ಮಡಣ್ಣ**
**ಲೆಕ್ಕವಿಲ್ಲವು ಬಿದ್ದ ತಲೆಗಳಿಗೆ**
**ಕತ್ತೀಯ ಮೇಲೆತ್ತಿ**
**ನುಗ್ಗಿದನೇ ಮುಮ್ಮಡಣ್ಣ**
**ತುರಕರ ತಲೆಯ ತರಿಯೂತ**

ಹೀಗೆ ಯುದ್ಧ ಮಾಡಿ ತುರುಕರನ್ನು ಪರಶುರಾಂಪುರದ ವರೆಗೂ ಹಿಮ್ಮೆಟಿಸಿ ವೇದಾವತಿ ನದಿಯಲ್ಲಿ ತಮ್ಮ ಶಸ್ತ್ರಾಸ್ತ್ರಗಳನ್ನು ತೊಳೆದುಕೊಂಡು ಬರುತ್ತಾರೆ. ಆದರೆ ಈ ಸಂತೋಷ ಶಾಶ್ವತವಾಗಿ ಉಳಿಯಲಿಲ್ಲ. ಶತ್ರುಗಳು ಮೋಸದಿಂದ ನೀಡುಗಲ್ಲಿನ ಮೇಲೆ ದಾಳಿ ಮಾಡಿ ಕೋಟೆಯನ್ನು ವಶಪಡಿಸಿಕೊಳ್ಳುತ್ತಾರೆ. ಇದರೊಂದಿಗೆ ಹೊಟ್ಟಣ್ಣ ನಾಯಕನ ಆಳ್ವಿಕೆ ಕೊನೆಗೊಂಡು ನಿಡುಗಲ್ಲು ಪರಕೀಯರ ವಶವಾಗುತ್ತದೆ.

ಇದೊಂದು ಐತಿಹಾಸಿಕ ದಾಖಲೆ; 'ಅಗಳಿಗಬ್ಯಾವ ರಸಬಳ್ಳಿ' ಭಾಗದಲ್ಲಿ ಹರತಿ ವಂಶವು ಕಟ್ಟಿದ ಕೋಟೆಯ ವರ್ಣನೆ ಸೊಗಸಾಗಿ ಮೂಡಿಬಂದಿದೆ. ಮತ್ತು ಇದೊಂದು ಐತಿಹಾಸಿಕ ದಾಖಲೆಯೂ ಹೌದು. "ಜಾನಪದವನ್ನು ಅಧ್ಯಯನ ಮಾಡುವುದು ಎಂದರೆ ಜೀವಂತ ಜನಜೀವನವನ್ನು ಅಧ್ಯಯನ ಮಾಡುವುದು ಎಂದರ್ಥ" ಎಂಬ ಜಿ. ಆರ್. ತಿಪ್ಪೇಸ್ವಾಮಿ ಮತ್ತು ರಂಗಾರೆಡ್ಡಿ ಕೋಡಿರಾಂಪುರ ರವರ ಮಾತು ಇಲ್ಲಿ ಪ್ರಸ್ತುತ. ಏಕೆಂದರೆ ಇಂತಹ ದಾಖಲೆಗಳು ಸ್ಥಳೀಯ ಚರಿತ್ರೆಯನ್ನು ಮರು ಸೃಷ್ಟಿಸಬಲ್ಲವು ಮತ್ತು ಜನಸಮುದಾಯಗಳ ಒಟ್ಟು ಬೆಳವಣಿಗೆ ಮತ್ತು ಪತನಗಳನ್ನು ಕುರಿತ ಅಧ್ಯಯನ ಕೂಡ ಹೌದು. ಅಂದರೆ ಇದು ಸಮುದಾಯಗಳನ್ನು ಮತ್ತು ಅವುಗಳ ಚರಿತ್ರೆಯನ್ನು ಒದಗಿಸುವಲ್ಲಿ, ಗುರುತಿಸುವಲ್ಲಿ, ನಿರ್ಧರಿಸುವಲ್ಲಿ, ಸಹಕಾರಿ. ಏಕೆಂದರೆ, ಒಂದನೇಯದು ಅನೇಕ ಸಾರಿ ಇತಿಹಾಸಕಾರರಿಗೆ ಸಿಕ್ಕ ಶಾಸನಗಳಲ್ಲಾಗಲಿ, ತಾಳೆಗರಿಗಳಲ್ಲಾಗಲಿ ಕೆಲವು ಅಕ್ಷರಗಳು ಅಥವಾ ಪದಗಳು ಅಳಿಸಿ ಹೋಗಿರುವ ಸಾಧ್ಯತೆಗಳಿತ್ತವೆ. ಎರಡನೇಯದು ಬೇರೆ ಬೇರೆ ಹಸ್ತಪ್ರತಿಗಳಲ್ಲಿ ಬೇರೆ ಬೇರೆ ರೀತಿಯ ಹೆಸರುಗಳು ಅಚ್ಚಾಗಿರುತ್ತವೆ. ಅಂತಹ ಸಂದರ್ಭದಲ್ಲಿ ಇಂತಹ ಜನಪದರು ಕಟ್ಟಿದ ಹಾಡುಗಳು ಐತಿಹಾಸಿಕತೆಯನ್ನು ನಿರ್ದಿಷ್ಟವಾಗಿ ಗುರುತಿಸಲು

ಸಾಧ್ಯವಾಗುತ್ತದೆ. ಅಂತಹ ಒಂದು ಸಾಧ್ಯತೆಯನ್ನು ತೋರುವ ಸಾಲುಗಳೆಂದರೆ 'ಹರತಿ ಕಟ್ಟಿದ ಕೋಟೆ', 'ದಟ್ಟಿಯ ಹೆಸರೇ ದಳವಾಯಿ', 'ಕತ್ತಿಯ ಹೆಸರೇ ಕಲಿಭೀರ', 'ವಲ್ಲಿಯ ಹೆಸರೇ ಲಿಂಗವಂತ', 'ಮುಮ್ಮಡಣ್ಣನ ಮೆಟ್ಟಿನ ಹೆಸರೇ ಮದಕರಿ'[3] ಇಂತಹ ಮಾತುಗಳಲ್ಲಿ ಇಡೀ ಐತಿಹಾಸಿಕತೆಯು ಬುಡಮೇಲಾಗುವ ಸಾಧ್ಯತೆಗಳು ಇರುತ್ತೆ. ಸ್ಥಳೀಯ ಚರಿತ್ರೆ ತನ್ನದೇ ಭೌಗೋಳಿಕ ಮಿತಿಗೊಳಪಟ್ಟರೂ ಸ್ಥಳೀಯ ಸಮುದಾಯಗಳ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಬೌದ್ಧಿಕ ಇತ್ಯಾದಿ ಸಂಗತಿಗಳ ವಿವರಗಳನ್ನು ಸಂಗ್ರಹಿಸಿಕೊಡುವ ವಿಪುಲ ಅವಕಾಶ ಅದಕ್ಕಿದೆ. ಈ ಮಾತಿನ ಹಿನ್ನೆಲೆಯಲ್ಲಿ ಡಾ. ಚಿತ್ತಯ್ಯ ಪೂಜಾರ್ ಅವರು ಸಂಪಾದಿಸಿರುವ 'ಮುಮ್ಮಡಿ ಹೊಟ್ಟಣ್ಣ ನಾಯಕನ ಕಥನ ಕಾವ್ಯ' ಎಂಬುದು ಸ್ಥಳೀಯ ಚರಿತ್ರೆಯನ್ನು ಕಟ್ಟಿಕೊಡಬಲ್ಲ 'ಜನಪದ ಆಕರ ಸಾಮಗ್ರಿ' ಎಂದೇ ನಾನು ಭಾವಿಸುತ್ತೇನೆ.

ಈ ಕಾವ್ಯದ ವೈಶಿಷ್ಟ್ಯವಿರುವುದು ನಾಯಕನ ವೀರಾಧಿವೀರ ಗುಣಗಳನ್ನು ಗುಣಗಾನ ಮಾಡುವುದರಲ್ಲಿ ಮಾತ್ರವಲ್ಲ. ಜನಸಾಮಾನ್ಯರು ಬದುಕಿ ಬಾಳುವ ಕುರುಹುಗಳು ಕಾವ್ಯದಲ್ಲಿ ಬಳಕೆಗೊಂಡಿರುವುದು ಈ ಕಾವ್ಯದ ಇನ್ನೊಂದು ವೈಶಿಷ್ಟ್ಯ. ಅಂದರೆ ಜನಪದರು ದೊರೆಯನ್ನು ನಿರೂಪಿಸುವಾಗ ನಿರೂಪಣೆಯಲ್ಲಿ ಜನಸಾಮಾನ್ಯರ ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಟ್ಟಿದ್ದಾರೆ. ಈ ಕಾಳಗದಲ್ಲಿ ಬರುವ ಯುದ್ಧದ ಬದಲಾಗಿ 'ಜಗಳ' ಎಂದು ಕರೆದಿದ್ದಾರೆ. ಯುದ್ಧಕ್ಕೆ ಹೊರಡುವಾಗ ಶಸ್ತ್ರಾಸ್ತ್ರ, ಕತ್ತಿ, ಗುರಾಣಿ, ಈಟಿ, ಬರ್ಜಿ ಮುಂತಾದವುಗಳನ್ನು ಬಳಸುವುದನ್ನು ಸಾಮಾನ್ಯವಾಗಿ ಕಾಣಬಹುದು. ಆದರೆ ಇಲ್ಲಿ ಅವುಗಳ ಬದಲಿಗೆ ಬಳಕೆಯಾಗಿರುವುದು 'ಹಾರ', 'ಗುದ್ದಲಿ'ಗಳ ಬಳಕೆ, 'ಹಾರಕ', 'ಸಜ್ಜೆ ಹೊಲ', 'ಎಮ್ಮೆ', 'ಗಂಜಿ', 'ಬಂಡಿ', 'ಬಾಳೆಹಣ್ಣು', 'ಮಣ್ಣು', 'ರಾಗಿ'. ಅಂದರೆ ಈ ಕಾವ್ಯ ರೂಪುಗೊಂಡಿರುವುದು ಸ್ಥಳೀಯ ಸಾಂಸ್ಕೃತಿಕ ಜೀವನ ಶೈಲಿಯ ಒಂದು ಸಾಂಸ್ಕೃತಿಕ ಚರಿತ್ರೆಯ ನಿರ್ಮಾಣದಲ್ಲಿ ಎಂಬುದನ್ನು ಮನಗಾಣಬೇಕಾಗುತ್ತದೆ. ಜನಪದರು ಎಷ್ಟೇ ಯುದ್ಧಗಳಾಗಲಿ, ಬರಗಾಲ ಬರಲಿ, ಕ್ಷಾಮಗಳಾಗಲಿ ಅವುಗಳಾವುದನ್ನೂ ಲೆಕ್ಕಿಸದೆ ತಮ್ಮ ಜೀವನ ಸಂಸ್ಕೃತಿಯನ್ನು ನಡೆಸುವ ಪರಿ ಇದರಿಂದ ವ್ಯಕ್ತವಾಗುತ್ತದೆ. ಈ ಕಾರಣದಿಂದಲೇ ನಮಗೆ ಇಂತಹ ಹುದುಗಿ ಹೋಗಿರುವ ದಾಖಲೆಗಳು ನಮ್ಮ ಜೀವನದ ಮಾರ್ಗದರ್ಶಕ ಅನರ್ಘ್ಯ ರತ್ನಗಳು ಎನ್ನಬಹುದು. ಇಂತಹ ಅನರ್ಘ್ಯ ರತ್ನವನ್ನು ಶೋಧಿಸಿಕೊಟ್ಟ ಚಿತ್ತಯ್ಯ ಪೂಜಾರ್ ಅವರು ಅಭಿನಂದನಾರ್ಹರು. ಒಟ್ಟಾರೆಯಾಗಿ ಐತಿಹಾಸಿಕ ವಸ್ತುವೊಂದು ಮೌಖಿಕ ಪರಂಪರೆಯಲ್ಲಿ ನಿರೂಪಣೆಗೊಳ್ಳುವಾಗ ಸಾಂಸ್ಕೃತಿಕವಾಗಿ ಮಹತ್ವವನ್ನು ಪಡೆದುಕೊಂಡಿದೆ.

ಮದಕರಿ ನಾಯಕನಿಗೆ 'ಜರಮಲೆ' ಸೀಮೆಗೆ ಯುದ್ಧಕ್ಕೆ ಬರುವಂತೆ ಓಲೆ ಬಂದರೆ,[4] ಮುಮ್ಮಡಿ ಹೊಟ್ಟಣ್ಣ ನಾಯಕನಿಗೆ ರಂಗಸಮುದ್ರ ಎನ್ನುವ ಹಳ್ಳಿಯಲ್ಲಿ ಬಿಡು ಬಿಟ್ಟ ಶತ್ರುಗಳಿಂದ ಯುದ್ಧಕ್ಕೆ ಬರುವಂತೆ ಓಲೆ ಬರುತ್ತೆ.

ಇದೇ ರೀತಿಯಲ್ಲಿ, ಯುದ್ಧಕ್ಕೆ ಹೊರಟಾಗ ಸರ್ಜಪ್ಪನಾಯಕ ತನ್ನ ತಾಯಿಯ ಅನುಮತಿ ಕೇಳುತ್ತಾನೆ. ಆಕೆ ಬೇಡವೆಂದರೂ ಯುದ್ಧಕ್ಕೆ ಹೊರಟು ಹೋಗುತ್ತಾನೆ.[5] ಮುಮ್ಮಡಿ ಹೊಟ್ಟಣ್ಣ ನಾಯಕನೂ ತನ್ನ ತಾಯಿಯ ಅನುಮತಿ ಕೇಳಿದಾಗ ಆಕೆಯು

ಬೇಡವೆನ್ನುತ್ತಾಳೆ. ಆದರೂ ಯುದ್ಧಕ್ಕೆ ಹೋಗುತ್ತಾನೆ. ಹೀಗೆ ಸರ್ಜಪ್ಪ ನಾಯಕ ಮತ್ತು ಮುಮ್ಮಡಿ ಹೊಟ್ಟಣ್ಣ ನಾಯಕ ಇಬ್ಬರೂ ತಾಯಿಯರ ಮಾತು ಕೇಳದೆ ಯುದ್ಧಕ್ಕೆ ಹೋಗುವುದರ ಸಾಮ್ಯತೆ ಜನಪದರು ನಂಬಿರುವ 'ಹಿರಿಯರ ಮಾತು ಕೇಳಬೇಕು' ಎಂಬ ತಾತ್ವಿಕತೆಯೂ ಆಗಿರಬಹುದು.

ಈ ಮೇಲಿನ ಎರಡೂ ಅಂಶಗಳಿಂದ ತಿಳಿಯುವುದೇನೆಂದರೆ, ಜನಪದರು ಎಲ್ಲಿಯೋ ಕೇಳಿದ, ನೋಡಿದ ವಿಷಯವನ್ನು ಕೆಲವು ಮಾರ್ಪಾಡುಗಳೊಂದಿಗೆ ಮೊದಲಿನ ಛಂದಸ್ಸನ್ನು ಆಧಾರವಾಗಿಟ್ಟುಕೊಂಡು ರಚಿಸಿರಬಹುದು. ಅಥವಾ ಇವೆರಡೂ ಏಕಕಾಲಕ್ಕೆ ರಚನೆಗೊಂಡಿರಬಹುದು. ಅಥವಾ ಇಬ್ಬರ ಆಳ್ವಿಕೆಯ ಕಾಲವು ಸ್ವಲ್ಪ ಹೆಚ್ಚು-ಕಡಿಮೆ ಒಂದೇ ಆಗಿರಲೂ ಸಾಧ್ಯವಿದೆ.

ಗದ್ಯದಲ್ಲಿ ಕೃತಕವೆನ್ನಿಸಬಹುದಾದ ಕಲ್ಪನೆಗಳು ಕಾವ್ಯಕ್ಕೆ ಸಹಜವಾಗುತ್ತವೆ. ಕೆಲವು ಅಂಗ ವಿನ್ಯಾಸಗಳು ನರ್ತನದಲ್ಲಿ ಸಹಜ ಎನಿಸುತ್ತವೆ; ನಡಿಗೆಯಲ್ಲಿ ಕೃತಕವೂ, ಹಾಸ್ಯಾಸ್ಪದವೂ ಆಗುತ್ತವೆ. ಕಾವ್ಯಕ್ಕೆ ಮಂಜೂರು ಮಾಡಿರುವ ಈ ಸವಲತ್ತುಗಳನ್ನು ಕಥನ ಕವನ ಬರೆಯುವಾಗ ಜನಪದರು ಸಾರ್ಥಕವಾಗಿ ಹಿಂದೆಯೇ ಬಳಸಿಕೊಂಡಿದ್ದಾರೆ. ಶುದ್ಧ ಕಾವ್ಯದ ಗೀತಾತ್ಮಕತೆ 'ಹೊಟ್ಟಣ್ಣ ನಾಯಕನ ಕಥನ ಕಾವ್ಯಕ್ಕೆ' ಇರುವುದು ವಿಶೇಷ. "ಶ್ರೇಷ್ಠವಾದ ಅನೇಕ ಕಥನ ಕವನಗಳು ತಮ್ಮ ಸ್ವರೂಪದಲ್ಲಿ ಭಾಗಶಃ ಭಾವಗೀತಾತ್ಮಕವಾಗಿರುತ್ತವೆ ಎಂಬ ಎ. ಸಿ. ಬ್ರಾಡ್ಲೆ ಯವರ ಮಾತನ್ನು ಈ ಕವನಕ್ಕೆ ಅನ್ವಯಿಸಬಹುದು".[6] ಏಕೆಂದರೆ, ಅಂತಹ ಭಾವನಾತ್ಮಕತೆಯು ಅನೇಕ ಕಡೆ ಬಂದಿದೆ. ಅದಕ್ಕೆ ಕೆಳಗಿನ ಪದ್ಯಗಳನ್ನು ಉದಾಹರಣೆಯಾಗಿ ನೋಡಬಹುದು.

**ಕಾಳಾಂಜನ ದುರ್ಗದಲಿ**
**ಅರಮನೆಯ ಸಾಲು ಸಾಲು**
**ಕಾಳೇಶ್ವರನ ಕೋಟೆಯಲಿ ರಾಣಿಯರ ಕೊಳ ಸಾಲು**
**ಬೆಸ್ತರಾ ಕೋಟೆಯಲಿ ಆಳೆತ್ತರದ ಮೀನು ಶತಕೋಟಿ**
**ಕಾಳಿನ ಕಣಜ ತುಪ್ಪದ ಕಣಜ**
**ಮದ್ದಿನಾ ಕಣಜ ಎಣಿಸಲಾಗದ ಲೆಕ್ಕ**
**ಇಂತು ನೀಲಾವತಿಗೆ ಸಮಾನಿಕರು ಆರುಂಟು ಧರೆಯೋಳಗೆ**[7]

ಈ ರೀತಿಯ ಭಾವನಾತ್ಮಕತೆಗಳು ಒಬ್ಬ ವ್ಯಕ್ತಿಯ ಕುರಿತು ವಿಶೇಷ ಪ್ರೀತಿ ಮತ್ತು ಕಾಳಜಿ ಇರುವಾಗ ಸಹಜವಾಗಿ ಹುಟ್ಟಿಕೊಳ್ಳುತ್ತವೆ.

ಸಂಶೋಧನೆಯ ಮುಂದಿನ ಸಾಧ್ಯತೆಗಳು; ಮುಮ್ಮಡಿ ಹೊಟ್ಟಣ್ಣ ನಾಯಕನ ಈ ಕಥನ ಕಾವ್ಯ ನೇರವಾಗಿ ಕಥಾ ಕ್ರಿಯೆಯೊಂದನ್ನು ಅವಲಂಬಿಸದೆ ಬೇರೆ ಕೆಲವು ಚಿತ್ರಗಳನ್ನು ನೀಡಿ ತಮ್ಮ ಉದ್ದೇಶದಲ್ಲಿ ಸೀಮಿತವಾಗಿ ಬಿಡುತ್ತದೆ. ವರ್ಣನಾತ್ಮಕ ಪದ್ಯಗಳಲ್ಲಿ ಕಥೆ ಹಸ್ತವ್ಯಸ್ಥವಾಗುತ್ತದೆ. ಕೆಲವು ಕಡೆ ಕಡಿದು ಹೋಗುತ್ತದೆ, ಕೆಲವು ಕಡೆ ಕಣ್ಮರೆಯಾಗುತ್ತದೆ. ಈ ವೀರನಿಗೆ ಸಂಬಂಧಿಸಿದ ವಿಸ್ತಾರವಾದ ಜನಪದ ಕಾವ್ಯವೊಂದು ಇದ್ದೀತೆಂಬ ವಿಷಯ ಈ ಪದ್ಯಗಳಲ್ಲಿ ಸ್ಪಷ್ಟಗೊಂಡಿದೆ. ಈ ಕಾವ್ಯ ಪೂರ್ಣಗೊಂಡಿಲ್ಲ ಎಂದಲ್ಲ, ಕಾವ್ಯದ ಇನ್ನೂ ಕೆಲವು

ಭಾಗಗಳಿವೆ ಎಂಬುದು ಮಾತ್ರ ನನ್ನ ಅನಿಸಿಕೆ. ಉದಾ;

**ಚೌಳೂರು ತನಕ**
**ನಡಿಯೆಂದ ಪರಶುರಾಂಪುರ**
**ಹಳದಾಗಾದ್ದೇವ ತೋಳೆಯೆಂದ (ಇದಾದ ನಂತರ)**
**...**
**ಗುದ್ದಲಿ ತರಸಿದ**
**ದಿಬ್ಬವ ಸರಿ ಮಾಡಿಸಿದ**
**ದೊಡ್ಡ ಪಿರಂಗಿಯ ನಿಲಿಸಂದ**

ಈ ಎರಡೂ ಪದ್ಯಗಳ ಮಧ್ಯೆ ಬೇರೆ ಏನೋ ವಿಷಯ ಇರುವ ಸಾಧ್ಯತೆ ಇದೆ. ಏಕೆಂದರೆ ಆಯುಧಗಳನ್ನು ತೊಳೆದ ಮೇಲೆ ದಾರಿ ಸರಿ ಮಾಡಿಸಿದ್ದು ಯಾಕೆ? ಮತ್ತೊಂದು ಯುದ್ಧಕ್ಕೋ, ಅಥವಾ ಈ ಮೊದಲೇ ಹೋರಾಡಿದ ಶತ್ರುಗಳೊಂದಿಗೆ ಮತ್ತೊಮ್ಮೆ ಯುದ್ದಕ್ಕೋ ಸ್ಪಷ್ಟವಾಗಬೇಕಾಗಿದೆ. ಹಾಗಾಗಿ ಈ ಕಥನ ಕಾವ್ಯವನ್ನು ಸಮಗ್ರವಾಗಿ ಸೂಕ್ಷ್ಮವಾಗಿ ಪರಿಶೀಲಿಸಿದಾಗ ಒಂದು ಕಥಾ ವಸ್ತುವನ್ನು ಸಂಪೂರ್ಣವಾಗಿ ನೀಡದೆ ಎಲ್ಲೋ ಒಂದು ಕಡೆ ಇನ್ನಷ್ಟು ಸಂಶೋಧನೆಗೆ ಒಳಪಟ್ಟರೆ ಅಪೂರ್ವವೋ ಅಸಮಗ್ರವೋ ಅಥವಾ ಹಲವು ಕಡೆ ಹಲವು ಭಾಗಗಳು ಬಿಟ್ಟು ಹೋದ ಸುಳಿವುಗಳು ಸಿಗುವುದರಿಂದ ಈ ಕಾವ್ಯವನ್ನು ಇನ್ನೊಮ್ಮೆ ಸಂಶೋಧನೆಗೆ ಒಳಪಡಿಸುವ ಅಗತ್ಯವಿದೆ ಎಂದು ನಾನು ಭಾವಿಸಿದ್ದೇನೆ.

## ಕೊನೆ ಟಿಪ್ಪಣಿಗಳು:


1. ರಂಗಾರೆಡ್ಡಿ ಕೊಡಿರಾಂಪುರ & ತಿಪ್ಪೇಸ್ವಾಮಿ ಜಿ. ಆರ್. (ಸಂ). (2003). ಜಾನಪದ ಸಿದ್ಧಾಂತಗಳು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ. ಬೆಂಗಳೂರು. ಪು.ಸಂ. xvii
2. ಚಿತ್ತಯ್ಯ ಪೂಜಾರ್ (ಸಂ). (2012). ನಿಡುಗಲ್ಲು ಪಾಳೆಯಗಾರ ಮುಮ್ಮಡಿ ಹೊಟ್ಟಣ್ಣ ನಾಯಕನ ಕಥನ ಕಾವ್ಯ. ಅನ್ನಪೂರ್ಣೇಶ್ವರಿ ಪಬ್ಲಿಕೇಶನ್. ಬೆಂಗಳೂರು. ಪು.ಸಂ. 49
3. ಚಿತ್ತಯ್ಯ ಪೂಜಾರ್ (ಸಂ). (2012). ನಿಡುಗಲ್ಲು ಪಾಳೆಯಗಾರ ಮುಮ್ಮಡಿ ಹೊಟ್ಟಣ್ಣ ನಾಯಕನ ಕಥನ ಕಾವ್ಯ. ಅನ್ನಪೂರ್ಣೇಶ್ವರಿ ಪಬ್ಲಿಕೇಶನ್. ಬೆಂಗಳೂರು. ಪು.ಸಂ. 49.
4. ಪರಮಶಿವಯ್ಯ ಜಿ. ಶಂ. (2016). ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು. ಅಭಿನವ ಪ್ರಕಾಶನ. ಬೆಂಗಳೂರು. ಪು.ಸಂ. 450.
5. ಪರಮಶಿವಯ್ಯ ಜಿ. ಶಂ. (2016). ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು. ಅಭಿನವ ಪ್ರಕಾಶನ. ಬೆಂಗಳೂರು. ಪು.ಸಂ. 415.
6. ವೆಂಕಟೇಶ್ ಮೂರ್ತಿ ಎಚ್. ಎಸ್. (1990). ಕಥನ ಕವನ. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು. ಪು.ಸಂ. 28.
7. ಚಿತ್ತಯ್ಯ ಪೂಜಾರ್ (ಸಂ). (2012). ನಿಡುಗಲ್ಲು ಪಾಳೆಯಗಾರ ಮುಮ್ಮಡಿ ಹೊಟ್ಟಣ್ಣ ನಾಯಕನ ಕಥನ ಕಾವ್ಯ. ಅನ್ನಪೂರ್ಣೇಶ್ವರಿ ಪಬ್ಲಿಕೇಶನ್. ಬೆಂಗಳೂರು. ಪು.ಸಂ. 56-57.

## ಆಕರ ಗ್ರಂಥ:


1. ಚಿತ್ತಯ್ಯ ಪೂಜಾರ್ (ಸಂ). (2012). ನಿಡುಗಲ್ಲು ಪಾಳೆಯಗಾರ ಮುಮ್ಮಡಿ ಹೊಟ್ಟಣ್ಣ ನಾಯಕನ ಕಥನ ಕಾವ್ಯ. ಅನ್ನಪೂರ್ಣೇಶ್ವರಿ ಪಬ್ಲಿಕೇಶನ್. ಬೆಂಗಳೂರು.


## ಪರಾಮರ್ಶನ ಗ್ರಂಥಗಳು:


1. ಪರಮಶಿವಯ್ಯ ಜಿ. ಶಂ. (2016). ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು. ಅಭಿನವ ಪ್ರಕಾಶನ. ಬೆಂಗಳೂರು.
2. ವೆಂಕಟೇಶ್ ಮೂರ್ತಿ ಎಚ್. ಎಸ್. (1990). ಕಥನ ಕವನ. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.
3. ಭಕ್ತವತ್ಸಲರೆಡ್ಡಿ ಎನ್. (ಪ್ರ.ಸಂ.). (2004). ಜಾನಪದ ಅಧ್ಯಯನ ಸೈದ್ಧಾಂತಿಕ ದೃಷ್ಟಿ. ದಕ್ಷಿಣ ಭಾರತೀಯ ಭಾಷೆಗಳ ಜಾನಪದ ಸಂಘ. ಬೆಂಗಳೂರು.
4. ರಂಗಾರೆಡ್ಡಿ ಕೊಡಿರಾಂಪುರ. (2010). ಜನಪದ ಸಂಸ್ಕೃತಿ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
5. ರಾಗೌ. (2009). ಜಾನಪದ ತತ್ವಾರ್ಥ ಪ್ರವೇಶ. ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ, ಕರ್ನಾಟಕ ಸಂಘ. ಮಂಡ್ಯ.
6. ಜಯರಾಮಯ್ಯ ವಿ. (ಸಂ). ನಿಡುಗಲ್ಲೆಂಬೋದು ಏಳು ಸುತ್ತಿನ ಕೋಟೆ. ಅವಿರತ ಪುಸ್ತಕ ಪ್ರಕಾಶನ. ಬೆಂಗಳೂರು.
7. ರಂಗಾರೆಡ್ಡಿ ಕೊಡಿರಾಂಪುರ & ತಿಪ್ಪೇಸ್ವಾಮಿ ಜಿ. ಆರ್. (ಸಂ). (2003). ಜಾನಪದ ಸಿದ್ಧಾಂತಗಳು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ. ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.